ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿಸಿ. ಸಂಖ್ಯೆ: 92/2024</u>**

ಪ್ರ.ವ.ಬೋ.ತಾಃ 17-06-2026

ಚಾಸಾಃ 21 ಫ್ರಾಸಾಃ 11

| | |
|---|---|
| ಸಾಕ್ಷಿಯ ಹೆಸರು | ಜಿ.ಪಿ.ವಿನೋದ್ |
| ತಂದೆ/ಗಂಡನ ಹೆಸರು | ಲೇ. ಗಂಗಯ್ಯ ಪುಟ್ಟರಾಜು |
| ವಯಸ್ಸು | 56 ವರ್ಷ |
| ವೃತ್ತಿ | ಎ.ಎಸ್.ಐ. ಮಧುಗಿರಿ ವೃತ್ತ ನಿರೀಕ್ಷರ ಕಚೇರಿ, ಮಧುಗಿರಿ |
| ವಾಸ | ತುಮಕೂರು ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನಾನು 2022 ರಿಂದ ಇಲ್ಲಿಯವರೆಗೆ ಮಧುಗಿರಿ ವೃತ್ತ ನಿರೀಕ್ಷರರ ಕಚೇರಿಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 11.09.2024 ರಂದು ಚಾಸಾ.23 ರವರು ಈ ಕೇಸಿಗೆ ಸಂಬಂಧಪಟ್ಟಂತೆ ಅಮಾನತ್ತು ಪಂಚನಾಮೆಯನ್ನು ಚಾಸಾ.6 ಮತ್ತು 7 ರವರ ಸಮಕ್ಷಮ ತಯಾರಿಸಿ ಆರೋಪಿ ಹಾಜರುಪಡಿಸಿದ ಅಪಘಾತಪಡಿಸಿದ ವಾಹನ ಸಂಃ ಕೆಎ-06-ಹೆಚ್ ಟಿ-6706 ನ್ನು ಅಮಾನತ್ತುಪಡಿಸಿಕೊಂಡಿದ್ದು, ಆ ಅಮಾನತ್ತು ಪಂಚನಾಮೆಯನ್ನು ನಾನು ಬೆರಳಚ್ಚು ಮಾಡಿಕೊಟ್ಟಿರುತ್ತೇನೆ. ಆ ಅಮಾನತ್ತು ಪಂಚನಾಮೆಯನ್ನು ಈಗ ನೋಡುತ್ತಿದು,

ಅದನ್ನು ನಿಪಿ.6 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.6(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆಯಲಾಗಿದ್ದು, ಆ ಫೋಟೋಗಳನ್ನು ನಿಪಿ.7 ಮತ್ತು 8 ಎಂದು ಈಗಾಗಲೇ ಗುರುತಿಸಲಾಗಿದೆ. ಆ ಫೋಟೋಗಳಿಗೆ ಸಂಬಂಧಪಟ್ಟಂತೆ ವಿಡಿಯೋ ಮಾಡಿ ಡಿ.ವಿ.ಡಿ. ತಯಾರಿಸಿರುತ್ತೇನೆ. ಆ ಡಿ.ವಿ.ಡಿ.ಯನ್ನು ನಿಪಿ.18 ಎಂದು ಗುರುತಿಸಲಾಯಿತು. ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 63(4) ರ ಅಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಆ ದೃಢೀಕರಣ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಆರೋಪಿ ಪರವಾಗಿ ಶ್ರೀ. ಎಂ.ಸಿ.ಕೆ. ವಕೀಲರಿಂದಃ–**

ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ